ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 ದಿನಾಂಕ: 26–09–2019

# ಪತ್ರಿಕಾ ಪ್ರಕಟಣೆ

## ಜಿ. ಎಸ್. ಜಯದೇವ್ ಅವರಿಗೆ 2019 ನೇ ಸಾಲಿನ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ

ಬೆಂಗಳೂರು, ಸೆಪ್ಟೆಂಬರ್ 26 ( ಕರ್ನಾಟಕ ವಾರ್ತೆ)

ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಆಶಯಗಳನ್ನು ಎಲ್ಲೆಡೆ ಪಸರಿಸಲು ಪೂರಕ ವಾತಾವರಣ ಕಲ್ಪಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕೊಡ ಮಾಡುವ 2019 ನೇ ಸಾಲಿನ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿಯನ್ನು ಚಾಮರಾಜನಗರ ಜಿಲ್ಲೆಯ ಬಿಳಿಗಿರಿ ರಂಗನಬೆಟ್ಟದ ಧೀನಬಂಧು ಸೇವಾ ಟ್ರಸ್ಟ್ ಸಂಸ್ಥಾಪಕ ಜಿ. ಎಸ್. ಜಯದೇವ್ ಅವರನ್ನು ಆಯ್ಕೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಐದು ಲಕ್ಷ ರೂ ನಗದು ಒಳಗೊಂಡ ಈ ಪ್ರಶಸ್ತಿಯನ್ನು ಆಯ್ಕೆ ಮಾಡಲು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಭೀಮನಗೌಡ ಸಂಗನಗೌಡ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಆಯ್ಕೆ ಸಮಿತಿಯ ಶಿಫಾರಸ್ಸನ್ನು ರಾಜ್ಯ ಸರ್ಕಾರವು ಅಂಗೀಕರಿಸಿ ಈ ಆದೇಶವನ್ನು ಹೊರಡಿಸಿದೆ ಎಂದು ಅಧಿಕೃತ ಪ್ರಟಕಣೆ ತಿಳಿಸಿದೆ.

# ಲಿಫ್ಟ್ ಸುರಕ್ಷಾ ನಿಯಮಗಳು

ಬೆಂಗಳೂರು, ಸೆಪ್ಟೆಂಬರ್ 26 (ಕರ್ನಾಟಕ ವಾರ್ತೆ ) :

ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ, ಪ್ಯಾಸೆಂಜರ್ ಕನ್ವೇಯರ್‌ಗಳ ಅಧಿನಿಯಮ– 2012, ಕರ್ನಾಟಕ ಲಿಫ್ಟ್‌ಗಳ, ಎಸ್ಕಲೇಟರ್‌ಗಳ, ಪ್ಯಾಸೆಂಜರ್ ಕನ್ವೇಯರ್‌ಗಳ ನಿಯಮ 2015 ಮತ್ತು (ತಿದ್ದುಪಡಿ) ನಿಯಮಗಳು 2017 ರ ಅನುಸಾರ:

ಕರ್ನಾಟಕ ರಾಜ್ಯದಲ್ಲಿ ಲಿಫ್ಟ್ / ಎಸ್ಕಲೇಟರ್/ ಪ್ಯಾಸೆಂಜರ್ ಕನ್ವೇಯರ್‌ಗಳನ್ನು ಅಳವಡಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ಮಾಲೀಕರು ಲಿಫ್ಟ್ ಅಳವಡಿಸಲು ಪ್ರಾಧಿಕೃತ ಅಧಿಕಾರಿಗಳಿಂದ ಸ್ಥಾಪನಾ

ಅನುಮತಿಯನ್ನು ಪಡೆಯತಕ್ಕದ್ದು ಹಾಗೂ ಲಿಫ್ಟ್ / ಎಸ್ಕ್‍ಲೇಟರ್ / ಪ್ಯಾಸೆಂಜರ್ ಕನ್ವೇಯರ್‌ಗಳನ್ನು ಬಳಸುವ ಮುನ್ನ ಚಾಲನಾ ಪರವಾನಗಿಯನ್ನು ಲಿಫ್ಟ್‌ಗಳು, ಎಸ್ಕಲೇಟರ್‌ಗಳು ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಮುಖ್ಯ ತಪಾಸಣಾಧಿಕಾರಿಗಳಿಂದ ಪಡೆದು ಉಪಯೋಗಿಸತಕ್ಕದ್ದು.

ಪ್ರತಿಯೊಂದು ಲಿಫ್ಟ್ / ಎಸ್ಕ್‍ಲೇಟರ್/ ಪ್ಯಾಸೆಂಜರ್ ಕನ್ವೇಯರ್‌ಗಳ ಲೈಸೆನ್ಸು ಮಂಜೂರು ಮಾಡಿದ ದಿನಾಂಕದಿಂದ 10 ವರ್ಷಗಳ ಅವಧಿಗೆ ಸಿಂಧುವಾಗಿರುತ್ತದೆ ಹಾಗೂ ಲೈಸೆನ್ಸ್ ಅನ್ನು ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಲಿಫ್ಟ್ ಮಾಲೀಕರು ಅದನ್ನು ನವೀಕರಿಸತಕ್ಕದ್ದು.

ಲಿಫ್ಟ್ / ಎಸ್ಕ್‍ಲೇಟರ್/ ಪ್ಯಾಸೆಂಜರ್ ಕನ್ವೇಯರ್‌ಗಳ ಮಾಲೀಕರು ಲಿಫ್ಟ್‌ಗಳು, ಎಸ್ಕ್‍ಲೇಟರ್‌ಗಳು ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ಮುಖ್ಯ ತಪಾಸಣಾಧಿಕಾರಿಯೊಂದಿಗೆ ನೋಂದಾಯಿತರಾದ ಲಿಫ್ಟ್ ಕಂಪೆನಿಗಳಿಂದ ಮಾತ್ರ ಲಿಫ್ಟ್ /ಎಸ್ಕಲೇಟರ್ / ಪ್ಯಾಸೆಂಜರ್ ಕನ್ವೇಯರ್‌ಗಳನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ನಿರ್ವಹಿಸಿಕೊಳ್ಳತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **www.ksei.gov.in** ಗೆ ಭೇಟಿ ನೀಡಬಹುದಾಗಿದೆ ಎಂದು ವಿದ್ಯುತ್ ಪರಿವೀಕ್ಷಣಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

## ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 26 ( ಕರ್ನಾಟಕ ವಾರ್ತೆ )

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ಹಾಗೂ ತಂತಿ ಕೆಲಸಗಾರರ ಪರೀಕ್ಷೆಗಳನ್ನು ನಡೆಸಲಿದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಇದೇ ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 29 ರವರೆಗೆ ಇಲಾಖೆಯ ವೆಬ್‌ಸೈಟ್ **www.ksei.gov.in** ನಲ್ಲಿ ಆನ್‌ಲೈನ್ ಸೇವೆ (ಇ-ಸುರಕ್ಷಾ) ಅಡಿಯಲ್ಲಿ ಸಲ್ಲಿಸಬಹುದಾಗಿದೆ ಹಾಗೂ ಸಲ್ಲಿಸಿರುವ ದಾಖಲೆಗಳ ಪ್ರತಿಗಳನ್ನು ಸಂಬಂಧಿಸಿದ ಉಪ ವಿದ್ಯುತ್ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಪರಿಷ್ಕೃತ ಕೀ-ಉತ್ತರ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 26 ( ಕರ್ನಾಟಕ ವಾರ್ತೆ )

ಕರ್ನಾಟಕ ಲೋಕಸೇವಾ ಆಯೋಗವು ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪನಿರೀಕ್ಷಕರ ಹುದ್ದೆಗಳ ನೇಮಕಾತಿ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆಯನ್ನು 17-02-2019ರಂದು ನಡೆಸಿದ್ದು, ಸದರಿ ಪರೀಕ್ಷೆಯ ಸಾಮಾನ್ಯ ಅಧ್ಯಯನ ಪತ್ರಿಕೆಯ-ಖಖ (ವಿಷಯ ಸಂಕೇತ 364) ರ ಕೀ-ಉತ್ತರಗಳನ್ನು ದಿನಾಂಕ: 08-05-2019 ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಪರಿಷ್ಕೃತ ಕೀ-ಉತ್ತರಗಳನ್ನು

ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ ಸೆಪ್ಟೆಂಬರ್ 21 ರಂದು ಪ್ರಕಟಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

## Key Answers Published

Bengaluru, September 26, (Karnataka Information)

The Karnataka Public Service Commission has conducted the competitive examination for the post of Excise Sub Inspector in the Department of EXCISE on 17-02-2019. For the said examination key answers was published on 08-05-2019 for General Studies paper –II (subject code-364) and the objections which were received for these key answers was verified, and revised key answers has been pubished in the Commission's website http://kpsc.kar.nic.in Key Answers on 21-09-2019 for information of the candidates.

## ಕೀ ಉತ್ತರ ಪ್ರಕಟ

**ಬೆಂಗಳೂರು, ಸೆಪ್ಟೆಂಬರ್ 26 ( ಕರ್ನಾಟಕ ವಾರ್ತೆ**

**2018 ಸಾಲಿನ ರಾಜ್ಯದ ವಿವಿಧ ನ್ಯಾಯಾಂಗ ಘಟಕಗಳಲ್ಲಿನ ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳಿಗೆ ದಿನಾಂಕ: 16–06–2019 (ಭಾನುವಾರ) ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯ ಪರಿಷ್ಕೃತ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ http://kpsc.kar.nic.in Key Answers ನಲ್ಲಿ ಸೆಪ್ಟೆಂಬರ್ 20 ರಂದು ಪ್ರಕಟಿಸಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.**

## ಅವಧಿ ವಿಸ್ತರಣೆ

**ಬೆಂಗಳೂರು, ಸೆಪ್ಟೆಂಬರ್ 26 ( ಕರ್ನಾಟಕ ವಾರ್ತೆ**

**2019–20 ಸಾಲಿನಿಂದ NTSE & NMMS ಪರೀಕ್ಷೆಗಳನ್ನು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ವತಿಯಿಂದ ನಡೆಸಲಾಗುತ್ತಿದ್ದು, ಸದರಿ ಪರೀಕ್ಷೆಗಳಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ www.kseeb.kar.nic.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದಿನಾಂಕ: 12–09–2019 ರಿಂದ ದಿನಾಂಕ: 25–09–2019 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಗಿತ್ತು.**

**ಇಲಾಖಾ ಅಧಿಕಾರಿಗಳು ಹಾಗೂ ಶಾಲಾ ಮುಖ್ಯ ಶಿಕ್ಷಕರ ಕೋರಿಕೆಯ ಮೇರೆಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು 30–9–2019 ರವರೆಗೆ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.**